

400 ಅಡಿ ಎತ್ತರದ ಬೆಟ್ಟದ ಮೇಲೆ ಗುಹಾಂತರ ದೇಗುಲವಿದೆ. ಪ್ರವೇಶ ದ್ವಾರದಲ್ಲಿರುವ ಅಶೋಕ ಸ್ತಂಭ ಗಮನ ಸೆಳೆಯುತ್ತದೆ. ಅದರ ಮೇಲೆ ಸಿಂಹಲಾಂಛನವೂ ಇವೆ. ಗುಹಾಲಯದ ಪ್ರವೇಶ ದ್ವಾರ ಭಿತ್ತಿಯಲ್ಲಿ 50 ಮೀಟರ್ ಎತ್ತರದ ವರೆಗೂ ಶಿಲೆಯಲ್ಲಿ ವಿಶಿಷ್ಟ ಕಲಾಕೃತಿಗಳನ್ನು ಕೆತ್ತಲಾಗಿದೆ. ಶಿಲೆಯಲ್ಲಿನ ನರ್ತಕಿಯ ದೇಹ ಸಿರಿ ಪ್ರೇಕ್ಷಕರ ಮೈಮನ ಮರೆಯುವಂತೆ ಮಾಡುತ್ತದೆ. ಮಹಿಳೆಯ ಕೊರಳಲ್ಲಿ ಆಭರಣಗಳು ಹಾಗೂ ಹೂಮಾಲೆ ಇವೆ. ಆಭರಣಗಳಿಗೆ ಬಣ್ಣವೂ ಇತ್ತು. ಕಾಲಾಂತರದಲ್ಲಿ ಅದು ಮಾಸಿ ಹೋಗಿದೆ ಎಂದು ಜನ ಆಡಿಕೊಳ್ಳುತ್ತಾರೆ.

ಆನೆಯ ಗಾತ್ರದಲ್ಲಿರುವ ಆನೆಯ ಪ್ರತಿಮೆಗಳು ಇಲ್ಲಿಯ ಪ್ರಮುಖ ಆಕರ್ಷಣೆ. ಗುಹಾಲಯದ ಎಡ ಹಾಗೂ ಬಲಕ್ಕೆ ತಲಾ ಮೂರು ಆನೆಯ ಪ್ರತಿಕೃತಿಗಳಿವೆ. ಬಲಭಾಗದ ಒಂದು ಆನೆಯ ಸೊಂಡಿಲು ಮಾತ್ರ ಸುಸ್ಥಿರವಾಗಿದ್ದು, ಉಳಿದ ಐದು ಆನೆಗಳ ಸೊಂಡಿಲುಗಳು ದಾಳಿಕೋರರಿಂದಾಗಿ ಭಗ್ನಗೊಂಡಿವೆ. ಆದರೆ ಅವುಗಳ ಆಕರ್ಷಣೆಗೆ ಕೊಂಚವೂ ಭಂಗ ಬಂದಿಲ್ಲ. ಆನೆಗಳ ಶಿಲ್ಪದ ಮೇಲೆಯೇ ಬುದ್ಧನ ಪ್ರತಿಮೆಗಳನ್ನು ಕೆತ್ತಲಾಗಿದ್ದು, ಬುದ್ಧ ಅಂಬಾರಿಯ ಮೇಲೆ ಮೆರವಣಿಗೆ ಹೊರಟಿರುವಂತೆ ಭಾಸವಾಗುತ್ತದೆ.

ಇಲ್ಲಿಂದ ಒಳಗೆ ಪ್ರವೇಶಿಸಿದರೆ 37.87 ಮೀಟರ್ ಉದ್ದ ಹಾಗೂ 13.87 ಅಗಲದ ಗುಹಾದೇವಾಲಯ ಇದೆ. ಒಳಾಂಗಣದಲ್ಲಿ ಎರಡೂ ಬದಿಗೂ ಅಷ್ಟಕೋನಾಕೃತಿಯ ಶಿಲಾ ಕಂಬಗಳಿದ್ದು, ಅದರ ಮೇಲೆ ಆನೆಯ ಮೇಲೆ ನಾಲ್ವರು ಕುಳಿತಿರುವ ಕೆತ್ತನೆಗಳಿವೆ. ಸಾಮಾನ್ಯವಾಗಿ ಎಲ್ಲ ಕಂಬಗಳ ಮೇಲೂ ಒಂದೇ ಬಗೆಯ ಕೆತ್ತನೆಗಳಿವೆ. ಬೌದ್ಧ ಸ್ತೂಪದ ಹಿಂಬದಿ ಇರುವ ಸ್ತಂಭಗಳು ಮಾತ್ರ ಸಪಾಟಾಗಿವೆ.

ಛಾವಣಿ ಅರ್ಧ ಚಂದ್ರಾಕಾರದಲ್ಲಿದೆ. ಕಮಾನು ಗೂಡಿನ ರೂಪದಲ್ಲಿ ಸಾಲಾಗಿ ಕಟ್ಟಿಗೆ ತೊಲೆಗಳನ್ನು ಜೋಡಿಸಲಾಗಿದೆ. ಕಟ್ಟಿಗೆ ತೊಲೆಯ ಜೋಡಣೆ ಅಂದಿನ ತಂತ್ರಜ್ಞಾನದ ಮೇಲೆ ಬೆಳಕು ಚೆಲ್ಲುತ್ತದೆ. ಭಾರದ ತೊಲೆಗಳನ್ನು ಹೇಗೆ ಬಿಗಿದಿರಬಹುದು ಎನ್ನುವ ಪ್ರಶ್ನೆ ಕಾಡುತ್ತದೆ. ಕಟ್ಟಿಗೆಯಲ್ಲಿನ ಕೆತ್ತನೆಗೂ ಗುಹಾಂತರ ದೇವಾಲಯ ಪ್ರಸಿದ್ಧಿ ಪಡೆದಿದೆ. ಗುಹೆಯ ಅಂಚಿನಲ್ಲಿ ದೊಡ್ಡದಾದ ಬೌದ್ಧ ಸ್ತೂಪವಿದೆ.

ಬೃಹತ್ ಗುಹಾದೇವಾಲಯದ ಬಲಬದಿಯಲ್ಲಿಯೇ ಏಕವೀರಾ ದೇವಿ ಮಂದಿರ ನಿರ್ಮಾಣ ಮಾಡಲಾಗಿದೆ. ಹೀಗಾಗಿ ಗುಹಾಲಯದ ಒಂದು ಬದಿ ಮರೆಮಾಚಿದೆ. ಏಕವೀರಾ ದೇವಿಯ ಪ್ರತಿಮೆಯನ್ನು ಯಾವಾಗ ಪ್ರತಿಷ್ಠಾಪಿಸಿದರೋ ತಿಳಿಯದು. ಇದರಿಂದಾಗಿ ಗುಹಾಲಯದ ಸೌಂದರ್ಯ ಮರೆ ಮಾಚಿದೆ. ಸ್ತಂಬ ಹಾಗೂ ಆನೆಸಾಲುಗಳ ಅಂಚಿನಲ್ಲಿ ಶಾಸನಗಳಿವೆ.

ಮೂರು ಅಂತಸ್ತಿನ ಗುಹಾಲಯಗಳ ಸಂಕೀರ್ಣವೂ ಇಲ್ಲಿದೆ. ಮುಖ್ಯ ದೇವಾಲಯದ ಬಲಕ್ಕೆ ತಿರುಗಿದರೆ ಆಧುನಿಕ ಮಾದರಿಯ ಮೆಟ್ಟಿಲುಗಳಿವೆ. 2,200 ವರ್ಷಗಳ ಹಿಂದೆಯೇ ಅವು ನಿರ್ಮಾಣಗೊಂಡಿದ್ದು, ಮೆಟ್ಟಿಲುಗಳ ಮೂಲಕ ಮೊದಲ ಮಹಡಿ ಹಾಗೂ ಎರಡನೇ ಮಹಡಿಗೂ ತಲುಪಬಹುದು. ಸುರಕ್ಷತೆಯ ದೃಷ್ಟಿಯಿಂದ ಕೆಲ ಗುಹಾಲಯಗಳಿಗೆ ಭಾರತೀಯ ಪುರಾತತ್ವ ಇಲಾಖೆ ಪ್ರವೇಶ ನಿರ್ಬಂಧಿಸಿದೆ.

ಮಳೆಗಾಲದಲ್ಲಿ ಬೆಟ್ಟದ ಮೇಲಿಂದ ಅಪಾರ ಪ್ರಮಾಣದಲ್ಲಿ ನೀರು ಹರಿದು ಬಂದು ಜಲಪಾತ ಸೃಷ್ಟಿಯಾಗುತ್ತದೆ. ಆಗ ಪ್ರವಾಸಿಗರ ಸಂಖ್ಯೆ ಇನ್ನೂ ಅಧಿಕವಾಗಿರುತ್ತದೆ. ಮುಂಬೈನಿಂದ ಬರುವ ಪ್ರವಾಸಿಗರೇ ಹೆಚ್ಚು.

### ಹೀಗೆ ಬನ್ನಿ :

ಕಾರ್ಲಾ ಗುಹೆ, ಭಾರತೀಯ ಪುರಾತತ್ವ ಇಲಾಖೆ (ಎ.ಎಸ್.ಐ)ಯ ಅಧೀನದಲ್ಲಿದೆ. ಪುಣೆಯಿಂದ ಇಲ್ಲಿಗೆ ನೇರವಾಗಿ ವಾಹನ ಸೌಲಭ್ಯ ಇಲ್ಲ. ಪುಣೆಯಿಂದ ಖಂಡಾಳಾಕ್ಕೆ ಹೋಗುವ ಮಹಾರಾಷ್ಟ್ರ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ಸಂಚರಿಸಿ ಮಾವಳ್ ತಾಲ್ಲೂಕಿನ ಕಾರ್ಲಾ ಕ್ರಾಸ್ ಬಳಿ ಇಳಿದರೆ ಹೆದ್ದಾರಿಯಿಂದ ಕಾರ್ಲಾ ಗ್ರಾಮದ ವರೆಗೆ ಹೋಗಲು ಆಟೋಗಳು ದೊರೆಯುತ್ತವೆ.

ಈ ಗ್ರಾಮದಿಂದ 2 ಕಿ.ಮೀ ಅಂತರದಲ್ಲಿ ಬೆಟ್ಟದ ಮೇಲೆ ಗುಹಾಂತರ ದೇವಾಲಯ ಇದೆ. ಬಿಸಿಲು ಹೆಚ್ಚಿದಂತೆ ಆಯಾಸ ಹೆಚ್ಚು. ಬೆಳಗಿನ ವೇಳೆಯಲ್ಲಿಯೇ ನಿಧಾನವಾಗಿ ಮೆಟ್ಟಿಗಳನ್ನು ಏರುತ್ತ ನಿಸರ್ಗ ರಮಣೀಯ ದೃಶ್ಯ ವೀಕ್ಷಿಸುತ್ತ ಬೆಟ್ಟದ ಮೇಲೆ ಬರುವುದು ಸೂಕ್ತ. ಮಾರ್ಗ ಮಧ್ಯದಲ್ಲಿ ಮೆಟ್ಟಿಲುಗಳ ಬದಿಯಲ್ಲಿ ಅಲ್ಲಲ್ಲಿ ಉಪಾಹಾರ ಗೃಹ, ತಂಪು ಪಾನೀಯ ಹಾಗೂ ಆಟಿಕೆ ಸಾಮಗ್ರಿಗಳ ಅನೇಕ ಅಂಗಡಿಗಳಿವೆ.


ಶಿಲಾಬಾಲಿಕೆಯರು


ಕಾರ್ಲಾ ಗುಹಾಂತರ ದೇವಾಲಯ